**ಘಾನಾಗೆ ಅಧಿಕೃತ ಭೇಟಿ ನೀಡಿದ ಪ್ರಧಾನಮಂತ್ರಿ (ಜುಲೈ 02, 2025)**

ಜುಲೈ 02, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ತಮ್ಮ ಘಾನಾ ಅಧಿಕೃತ ಭೇಟಿಯ ನಿಟ್ಟಿನಲ್ಲಿ ಇಂದು ಅಕ್ರಾಗೆ ಬಂದಿಳಿದರು. ವಿಮಾನ ನಿಲ್ದಾಣದಲ್ಲಿ ಇಳಿದ ಪ್ರಧಾನಮಂತ್ರಿಯವರನ್ನು ಘಾನಾ ಅಧ್ಯಕ್ಷ ಗೌರವಾನ್ವಿತ ಜಾನ್ ಡ್ರಾಮಣಿ ಮಹಾಮಾ ಸ್ವತಃ ಬರ ಮಾಡಿಕೊಂಡರು ಮತ್ತು ವಿದ್ಯುಕ್ತ ಸ್ವಾಗತವನ್ನು ನೀಡಿದರು. ಈ ನಡೆಯು ಎರಡು ರಾಷ್ಟ್ರಗಳ ನಡುವಿನ ಸ್ನೇಹದ ಬಲವಾದ ಮತ್ತು ಐತಿಹಾಸಿಕ ಬಂಧಗಳನ್ನು ಪ್ರತಿಬಿಂಬಿಸುತ್ತದೆ.

2. ಕಳೆದ ಮೂರು ದಶಕಗಳಲ್ಲಿ ಘಾನಾಗೆ ಭಾರತೀಯ ಪ್ರಧಾನಿಯೊಬ್ಬರ ಮೊದಲ ಭೇಟಿ ಇದಾಗಿದೆ. ಈ ಐತಿಹಾಸಿಕ ಭೇಟಿಯು ಭಾರತ ಮತ್ತು ಘಾನಾ ನಡುವಿನ ಪಾಲುದಾರಿಕೆಯನ್ನು ಮತ್ತಷ್ಟು ಆಳಗೊಳಿಸುತ್ತದೆ ಹಾಗೂ ಆಫ್ರಿಕಾ ಮತ್ತು ಜಾಗತಿಕ ದಕ್ಷಿಣ ಪಾಲುದಾರರೊಂದಿಗೆ ತನ್ನ ತೊಡಗುವಿಕೆಯನ್ನು ಬಲಪಡಿಸುವ ಭಾರತದ ಬದ್ಧತೆಯನ್ನು ಒತ್ತಿ ಹೇಳುತ್ತದೆ.

ಅಕ್ರಾ

ಜುಲೈ 02, 2025